ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ :   22-03-2021   ಪ್ರಶ್ನೆ ಸಂಖ್ಯೆ :   1566 (1837)

ಸದಸ್ಯರ ಹೆಸರು ಮತ್ತು ಕ್ಷೇತ್ರ :   ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ :   22-03-2021

ಉತ್ತರಿಸುವ ಸಚಿವರು :   ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ವಿಷಯ :   ಐಟಿಐ ಕಾಲೇಜುಗಳ ಕುರಿತು

(ಅ) ರಾಜ್ಯದಲ್ಲಿರುವ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)ಹೊಸದಾಗಿ ಈ ಕಾಲೇಜುಗಳನ್ನು ಪ್ರಾರಂಭಿಸಲು ಅಗತ್ಯವಾದ ಮಾನದಂಡಗಳು ಯಾವುವು ; (ಸುತ್ತೋಲೆಯ ಪ್ರತಿಯನ್ನು ಒದಗಿಸುವುದು)

(ಆ) ಉಡುಪಿ ಜಿಲ್ಲೆಯಲ್ಲಿರುವ ಸರ್ಕಾರಿ ತಾಂತ್ರಿಕ ಕಾಲೇಜುಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ಬೋಧಿಸಲ್ಪಡುವ ವಿಷಯಗಳು ಯಾವುವು; ಅವುಗಳ ವಿದ್ಯಾರ್ಥಿಗಳ ಸೀಟ್ ಸಾಮರ್ಥ್ಯ ಎಷ್ಟು ; ಖಾಲಿಯಿರುವ ಸೀಟ್‌ಗಳ ಸಂಖ್ಯೆ ಎಷ್ಟು ; ಹೆಚ್ಚುವರಿ ಸೀಟ್‌ನ ಬೇಡಿಕೆ ಇದೆಯೇ ; ಈ ಕಾಲೇಜುಗಳಿಗೆ ಮಂಜೂರಾತಿಯಾದ ಹುದ್ದೆಗಳು ಯಾವುವು ಮತ್ತು ಕೊರತೆಯಿರುವ ಹುದ್ದೆಗಳು ಯಾವುವು ; ಕೊರತೆಯನ್ನು ಯಾವಾಗ ತುಂಬಲಾಗುವುದು; (ತಾಲ್ಲೂಕುವಾರು, ಕಾಲೇಜುವಾರು ಮಾಹಿತಿಯನ್ನು ನೀಡುವುದು)

(ಇ) ಉಡುಪಿ ಜಿಲ್ಲೆಯಲ್ಲಿರುವ ಖಾಸಗಿ ತಾಂತ್ರಿಕ ಕಾಲೇಜುಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ಬೋಧಿಸಲ್ಪಡುವ ವಿಷಯಗಳು ಯಾವುವು; ಅವುಗಳ ವಿದ್ಯಾರ್ಥಿಗಳ ಸೀಟ್ ಸಾಮರ್ಥ್ಯ ಎಷ್ಟು ; ಖಾಲಿಯಿರುವ ಸೀಟ್‌ಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು, ಕಾಲೇಜುವಾರು ಮಾಹಿತಿಯನ್ನು ನೀಡುವುದು)

(ಈ) ಉಡುಪಿ ಜಿಲ್ಲೆಯಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಐಟಿಐ ಕಾಲೇಜುಗಳ ಸಂಖ್ಯೆ ಎಷ್ಟು ; ಅವುಗಳು ಯಾವುವು ; ಅವುಗಳು ಪಾವತಿಸುತ್ತಿರುವ ವಾರ್ಷಿಕ ಬಾಡಿಗೆ ಮೊತ್ತವೆಷ್ಟು; ಅವುಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಕಾರಣವೇನು ; ಇವುಗಳು ಸ್ವಂತ ಕಟ್ಟಡವನ್ನು ಹೊಂದುವ ಬಗ್ಗೆ ಸರ್ಕಾರದ ಕ್ರಮವೇನು ? (ಕಾಲೇಜುವಾರು ಮಾಹಿತಿಯನ್ನು ಒದಗಿಸುವುದು)